ವಧುವಾಗಿದ್ದೇನೆ. ಹಾಸಿಗೆಯ ಮೇಲೆಲ್ಲಾ ನಾನು ಇಷ್ಟಪಡುವ ಕಡುಕೆಂಪು ಗುಲಾಬಿ ಹೂಗಳು ಹರಡಿವೆ. ಮಲ್ಲಿಗೆಯ ಬಳ್ಳಿಗಳು ಅಕ್ಕಪಕ್ಕದಲ್ಲಿ ತೂಗುತ್ತಿವೆ. ಆದರೆ ನನ್ನ ಶರೀರದಿಂದ ಯಾವುದೇ ಆಕರ್ಷಣೆಯ ಪರಿಮಳ ಹೊರಸೂಸುವ ಲಕ್ಷಣವಿರಲಿಲ್ಲ. ಬದಲಾಗಿ ಕಣ್ಣೀರು... ಎಷ್ಟೇ ತಡೆಯಲೆತ್ನಿಸಿದರೂ ಕಣ್ಣೀರ ಹನಿಗಳು ಮೂಗಿನ ಬಳಿ ಇಳಿದು ತೊಟ್ಟಿಕ್ಕುತ್ತಿವೆ. ನಾನು ಏಳಲೆತ್ನಿಸಿದೆ. ಆದರೆ ಅವರಿಗೆ ಎಚ್ಚರವಾಗಿ ಬಿಟ್ಟರೆ ಎಂಬ ಭಯ ಆವರಿಸಿತು. ಹಾಗೇ ಮೆಲ್ಲನೆ ಎದ್ದು ದಿಂಬಿಗೆ ಬೆನ್ನು ಆನಿಸಿ ಕುಳಿತುಕೊಳ್ಳಲು ಪ್ರಯತ್ನಿಸಿದೆ. ಕೂಡಲೆ ಛನ್... ಛನ್... ಎಂದು ಕಾಲಿನ ಗೆಜ್ಜೆಯ ಸದ್ದು; ನಾನು ಕಾಲನ್ನು ಅಲ್ಲಾಡಿಸದೇ ಹಾಗೆಯೇ ಕುಳಿತೆ. ಕಣ್ಣೀರು ಮಾತ್ರ ಮೂಗಿನ ಸುತ್ತ ಸುತ್ತುತ್ತ ತುಟಿಯನ್ನು ತೋಯಿಸುತ್ತಿದ್ದವು. ನಾನು ಧೈರ್ಯ ಮಾಡಿ ಉಸಿರು ಬಿಗಿಹಿಡಿದು ಮೂಗುನತ್ತನ್ನು ತೆಗೆದೆ. ದಿಂಬಿಗೆ ತಲೆ ಇಟ್ಟಾಗ ಕೂದಲುಗಂಟು ಬಿಚ್ಚತೊಡಗಿತು. ಬಹುಶಃ ಜಡೆಬಿಲ್ಲೆ ಕೂದಲಿಗೆ ಸಿಕ್ಕಿಹಾಕಿಕೊಂಡಿರಬೇಕು. ಕೈ ಹಾಕಿ ತಡವಿ ಅದನ್ನು ಹುಡುಕಿ ತೆಗೆಯಲು ಯತ್ನಿಸಿದರೆ ಇಡೀ ಕೂದಲ ಗಂಟೇ ಕೈಗೆ ಬಂತು. ಕಣ್ಣೀರು ಕಡಿಮೆಯಾದವು. ಮುಖ ಬಿಗಿಯಾಯಿತು. ಕಣ್ಣು ಮುಚ್ಚಲು ಪ್ರಯತ್ನಿಸಿದೆ. ಆದರೆ ಈ ದರಿದ್ರ ಜೋಡಿ ಕಂಗಳೊಳಗೆ ಅದೆಂಥದೋ ಥರದ ನೋವು.

'ಯಾ... ಅಲ್ಲಾ!... ಇದು ಪ್ರಥಮ ರಾತ್ರಿಯೇ?... ನನ್ನ ಈ ಪ್ರಯತ್ನದಿಂದ ನನ್ನ ಮೇಲೆ ಅಧಿಕಾರ ಹೊಂದಿರುವ ಪತಿದೇವರಿಗೆ ಏನಾದರೂ ಡಿಸ್ಟರ್ಬೆನ್ಸ್ ಆಯಿತೇನೋ' ಎಂದು ಅವರ ಕಡೆಗೊಮ್ಮೆ ನೋಡಿದೆ. ಏಕೆಂದರೆ 'ಅಂದಚೆಂದ ಮಾಡಿಕೊಳ್ಳುವುದೆಲ್ಲ ಅವರಿಗೇ ಸೇರಿದ್ದು' ಎಂದು ಅಮ್ಮ ಹೇಳಿದ್ದಳು. ಸದ್ಯ... ಅವರು ನನ್ನ ಕಡೆಗೆ ಬೆನ್ನು ಮಾಡಿಕೊಂಡು ನಿದ್ರಿಸುತ್ತಿದ್ದರು. ಈಗ ಸ್ವಲ್ಪ ಹಗುರ ಎನಿಸಿತು. ಕಣ್ಣು ಮುಚ್ಚಿದೆ. ತಕ್ಷಣ ಗಾಬರಿಯಾಗಿ ಆ ಕನಸಿನರಾಜಕುಮಾರ ಬಂದುಬಿಟ್ಟರೆ!... ಎಂದು ಪುನಃ ಕಣ್ಣು ತೆರೆದುಬಿಟ್ಟೆ.

ಟಕ್... ಟಕ್... ಶಬ್ದದೊಂದಿಗೆ ತಡಬಡಿಸಿ ಎದ್ದ ಅವರು ನನ್ನ ಕಡೆಗೆ ನೋಡದೆ ಹೇಳಿದರು... "ಅರೇ, ಬೆಳಗಾಗಿದೆ. ಗಡದ್ದಾಗಿ ನಿದ್ದೆ ಹೋಗಿಬಿಟ್ಟೆಯೇನು?" ನನ್ನ ಪ್ರತಿಕ್ರಿಯೆಗೆ ಕಾಯದೆ ಬಾಗಿಲ ಕಡೆಗೆ ನಡೆದರು. ಪುನಃ ತಿರುಗಿ ನೋಡಿ ಹೇಳಿದರು... "ತಲೆತೊಳೆದು ಸ್ನಾನಮಾಡು..." ಒಂದು ಕ್ಷಣ ನನ್ನ ಕಣ್ಣೊಳಗೆ ಕಣ್ಣೀರು ನೋಡಿದರು. ನಾನು ಗಾಬರಿಯೂ ಆಗಿ 'ಆಗಲಿ' ಎನ್ನುವಂತೆ ಕುತ್ತಿಗೆ ಅಲ್ಲಾಡಿಸಿದೆ. ಅವರು ಕೊಠಡಿಯಿಂದ ಹೊರಗೆ ಹೋದರು.

ನನ್ನ ಇಬ್ಬರು ನಾದಿನಿಯರು ಎಡಬಲದಲ್ಲಿ ನಿಂತು ನನ್ನನ್ನು ವೀಕ್ಷಿಸತೊಡಗಿದರು. ನಾನು ಅವರ ಅಪ್ಪಣೆಯನ್ನು ನೆರವೇರಿಸಲು ಸ್ನಾನದ ಮನೆಯ ದಾರಿ ಕೇಳಿದಾಗ ಅವರಿಬ್ಬರ ನಗು ಕೇಕೆಯಾಗಿ ಬದಲಾಗಿಬಿಟ್ಟಿತು. ನಾನು ಕೂಡಲೆ ಸ್ನಾನದ ಮನೆಯಲ್ಲಿ ಆಶ್ರಯ ಪಡೆದೆ. ಡಿಸೆಂಬರ್ ತಿಂಗಳ ಕೊರೆವ ಚಳಿಯಲ್ಲಿ ಬೆಳಗ್ಗೆ ಐದು ಗಂಟೆಗೇ ಸ್ನಾನ ಮಾಡುವುದೆಂದರೆ!... ಅದರ ಮೇಲೆ ಈ ನೀಳ್ಗೂದಲಿನ ಸಮಸ್ಯೆ ಬೇರೆ. ಆದರೆ ಅವರ ಅಪ್ಪಣೆಯನ್ನು ನಗಣ್ಯ ಮಾಡುವುದೆಂದರೆ ದೊಡ್ಡ ಅಪರಾಧವೇ ಸರಿ. ದೇವರೇ... ದೇವರೇ!

ಒಂದು ವಾರ ಮದುವೆಯ ಸಂಪ್ರದಾಯದಲ್ಲಿ ಕಳೆದುಹೋಯಿತು. ಹನಿಮೂನ್‌ಗಾಗಿ ವಿಮಾನದಲ್ಲಿ ನಾವು ಶ್ರೀನಗರ ತಲುಪಿದೆವು. ಅಲ್ಲಿ ಪಂಚತಾರಾಹೋಟೆಲ್ ಒಂದರಲ್ಲಿ ಕೊಠಡಿಯನ್ನು ಕಾಯ್ದಿರಿಸಲಾಗಿತ್ತು. ಚಳಿ ತನ್ನ ತಾರುಣ್ಯಕ್ಕೆ ತಲುಪಿತ್ತು. ಜೋರಾಗಿಯೇ ಹಿಮ ಸುರಿಯುತ್ತಿತ್ತು. ಕೋಣೆಯೊಳಗೆ ಪ್ರವೇಶಿಸುತ್ತಲೇ ಅವರು ಹೇಳಿದರು... "ಬಟ್ಟೆ ಬದಲಾಯಿಸಿ ಆರಾಮಾಗಿ ಮಲಗಿಕೋ..."

"...ಆಯ್ತು" ಎಂದ ನಾನು ಬಾತ್‌ರೂಂಗೆ ಹೋಗಿ ಬಟ್ಟೆ ಬದಲಾಯಿಸಿ ಬಂದು ನೋಡಿದೆ. ಅವರು ಸಮಾಚಾರಪತ್ರಿಕೆ ಓದುವುದರಲ್ಲಿ ಮಗ್ನರಾಗಿದ್ದರು. ನಾನು ಅವರ ಪಕ್ಕದಲ್ಲಿಯೇ ಹಾಸಿಗೆಯ